ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ.—ಕುಂಬಳಕಾಯಿ ಕಳ್ಳ ಯಾರು ಎಂದರೆ ಹೆಗಲು ಮುಟ್ಟಿನೋಡಿ ಕೊಂಡರು–ಎಂದ ಹಾಗೆ ಆಯಿತು. ನಾನು ತಮ್ಮ ಬಗ್ಗೆ ಹೇಳಿಲ್ಲ. ನಾನು ಹೇಳಿದ್ದುದು ಇಷ್ಟೇ, ಸೊಸೈಟಿಗಳಿಗೆ ಪರ್ಮಿಷನ್ ಕೊಟ್ಟು ಬೆಂಗಳೂರು ಹಾಳು ಮಾಡುತ್ತಿದ್ದಾರೆ ಎಂದು ಹೇಳಿದರು. ಅದಕ್ಕೆ, ನಾನು ಹೇಳಿದ್ದೇನೆಂದರೆ, ನಮ್ಮ ಕಾಲದಲ್ಲಿ ಒಂದು–ಎರಡು ಸೊಸೈಟಿಗಳಿಗೆ ಮಾತ್ರ ಪರ್ಮಿಷನ್ ಕೊಟ್ಟಿದ್ದೇವೆ. ಎಲ್ಲಾ ಸೊಸೈಟಿಗಳು ಹಿಂದೆ ಆಗಿದ್ದುದು ಎಂದು ಹೇಳಿದ್ದೆ. ಸೊಸೈಟಿಗಳು ರಿಜಿಸ್ಟರ್ಡ್ ಆಗಿರುವುದರ ಬಗ್ಗೆ ನಾನು ಹೇಳುತ್ತಾ ಇದ್ದೇನೆ. ವಿವರಗಳು ಬೇಕಾದರೆ ನಾನು ಕೊಡುತ್ತೇನೆ. ಅಧಿಕಾರಿಗಳು ಏನು ಕೊಡುತ್ತಾರೋ ಅದನ್ನು ತಮಗೆ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಕೇಳಿದ ವಿವರಣೆಗಳು ಇವೊತ್ತು ಇಲ್ಲ. ಎಷ್ಟೋ ಜನ ಸಂಘದ ಸದಸ್ಯರು ಇರುತ್ತಾರೆ, ಎಲ್ಲೆಲ್ಲೋ ಜಮೀನನ್ನು ಅವರಿಗೆ ಕೊಟ್ಟಿದ್ದಾರೆ. ಅದನ್ನೆಲ್ಲಾ ಕ್ಷಿಪ್ರ ಸಮಯದಲ್ಲಿ ಪಡೆಯಲು ಸಾಧ್ಯವಿಲ್ಲ. ಸದಸ್ಯರಿಗೆ ಸೂಕ್ತ ಕಾಲದಲ್ಲಿ ಉತ್ತರವನ್ನು ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು.—ಧರ್ಮಸಿಂಗ್‌ರವರೇ ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ವಿವರವನ್ನು ಕೊಡುವ ವಿಚಾರದಲ್ಲಿ ಏನೇನೋ ಹೇಳಿದ್ದಾರೆ. ಸರಕಾರ ಇರತಕ್ಕಂಥದ್ದು ವಿವರಗಳನ್ನು ಕೊಡಲಿಕ್ಕೆ. ನಾವು ಇಲ್ಲಿರುವುದು ಪ್ರಶ್ನೆಗಳನ್ನು ಕೇಳಲಿಕ್ಕೆ. ನೀವು ನಮ್ಮ ಹಕ್ಕನ್ನು ರಕ್ಷಣೆ ಮಾಡಬೇಕು. ತಾವು ದಯಮಾಡಿ ಅವರಿಗೆ ಡೈರೆಕ್ಷನ್ ಕೊಡಿ. ರಾಜ್ಯ ಸಭೆಯಲ್ಲಿ ಮಾನ್ಯ ವೆಂಕಟರಾಮಯ್ಯನವರು ಪ್ರಶ್ನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಸಜೆಸ್ಟ್ ಮಾಡಿದ್ದಾರೆ. ತಾವೂ ಹಾಗೆಯೇ ನಿರ್ದೇಶಿಸಿ.

ಅಧ್ಯಕ್ಷರು.—ಆಯಿತು, ಆದಷ್ಟು ಜಾಗ್ರತೆ ಯಾವ ಯಾವ ಪ್ರಶ್ನೆಗಳಿಗೆ ಉತ್ತರ ಬಂದಿವೆ, ಯಾವ ಯಾವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ ಎಂದು ನೋಡಿಕೊಂಡು, ತ್ವರಿತವಾಗಿ ಉತ್ತರವನ್ನು ಒದಗಿಸಿಕೊಡುವಂತೆ ನಾನು ಎರಡು ಸಲ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ. ಇಲ್ಲಿಯೂ ಹೇಳಿದ್ದೇನೆ. ಮಾನ್ಯ ಧರ್ಮಸಿಂಗ್‌ರವರು ಈಗ ತಮ್ಮ ಪ್ರಶ್ನೆಯನ್ನು ಕೇಳಬಹುದು.

ಜೇವರ್ಗಿಯಲ್ಲಿ ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಉಳಿಸಿಕೊಳ್ಳುವುದು

೬೬ (೧೬೩)(೫) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿಯ ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯವು ಸ್ಥಳಾಂತರವಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳು?

ಇ) ವಿದ್ಯಾರ್ಥಿ ನಿಲಯವು ಸ್ಥಳಾಂತರವಾಗಿರುವುದರಿಂದ ವಿದ್ಯಾರ್ಥಿನಿಯರು ಕಷ್ಟಕ್ಕೆ ಸಿಲುಕಿದ್ದಾರೆ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಜೇವರ್ಗಿ ಗ್ರಾಮದಲ್ಲಿ ನಿಲಯವನ್ನು ಮುಂದುವರೆಸಿಕೊಂಡು ಬರಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ೧೯೮೫–೮೬ನೇ ಸಾಲಿನಲ್ಲಿ ಸತತ ಪ್ರಯತ್ನ ಮಾಡಿದಾಗಲು ಸಹ ಮಂಜೂರಾತಿಯಾದ ೨೫ ಸಂಖ್ಯಾಬಲವನ್ನು ತುಂಬಲು ಸಾಧ್ಯವಾಗಲಿಲ್ಲ, ಕೇವಲ ನಿಲಯಕ್ಕೆ ೫–೬ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳಲಾಗಿತ್ತು.

ಇ) ಬಂದಿದೆ.

ಈ) ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಭೇಟಿ ಇತ್ತಾಗ ಸ್ಥಳೀಯ ಪರಿಸ್ಥಿತಿಯನ್ನು ಮನಗಂಡು ಈ ವರ್ಷದಿಂದಲೇ ಜೇವರ್ಗಿಯಲ್ಲಿ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲಾಗುವುದೆಂದು ತೀರ್ಮಾನಿಸಲಾಗಿದೆ.

ಶ್ರೀ ಧರ್ಮಸಿಂಗ್.—ಮಾನ್ಯ ಸಚಿವರು ಈ ವಿಚಾರದಲ್ಲಿ ಏನು ಬಹಳ ಒಳ್ಳೆಯ ಕ್ರಮವನ್ನು ತೆಗೆದುಕೊಂಡಿದ್ದಾರೆ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಆದರೆ ಇಲಾಖೆಯ ಅಧಿಕಾರಿಗಳು ವಿದ್ಯಾರ್ಥಿನಿ ನಿಲಯಕ್ಕೆ ಭೇಟಿ ಕೊಟ್ಟಾಗ ಕೇವಲ ೫–೬ ಜನರು ಮಾತ್ರ ಇದ್ದರು ಎಂದು ಹೇಳಿದ್ದಾರೆ. ಅದು ಸರಿಯಲ್ಲ. ೧೯ ಜನ ವಿದ್ಯಾರ್ಥಿನಿಯರು ಇದ್ದರು. ಇನ್ನೂ ಹೆಚ್ಚು ಜನ ವಿದ್ಯಾರ್ಥಿನಿಯರು ಬರುತ್ತಾರೆ. ಅಲ್ಲಿನ ಬಿ.ಡಿ.ಓ. ಮೆತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಹಳ್ಳಿಗಳಿಗೆ ಹೋಗಿ ಆ ಜನರಿಗೆ ಒದಗಿಸಿರುವ ಸೌಲಭ್ಯಗಳ ಬಗ್ಗೆ ಪ್ರಚಾರ ಮಾಡಬೇಕು, ತಿಳಿಸಿ ಹೇಳಬೇಕು. ಬಡವರು ಹಿಂದುಳಿದವರು ಅದ ಅವರಿಗೆ ಇರುವ ಸೌಕರ್ಯಗಳ ಬಗ್ಗೆ ಹೇಳಿದರೆ ಮನವರಿಕೆಯಾಗುತ್ತದೆ. ಹಾಗೆ, ಆ ರೀತಿಯಲ್ಲಿ ಯಾವುದೇ ಪ್ರಚಾರ ಕಾರ್ಯವನ್ನು ಯಾರೂ ಮಾಡಿಲ್ಲ. ನಮ್ಮಲ್ಲಿ ೧೪೬ ಹಳ್ಳಿಗಳು ಇವೆ. ಕನಿಷ್ಟ ಅಲ್ಲಿಂದ ೪೦–೫೦ ಮಕ್ಕಳು ಬಂದೇ ಬರುತ್ತಾರೆ. ನಾನೂ ಕೂಡ ಎಲ್ಲಾ ಕಡೆಗಳಲ್ಲಿ ಈ ವಿಷಯದ ಬಗ್ಗೆ ತಿಳುವಳಿಕೆ ಕೊಟ್ಟಿದ್ದೇನೆ. ಅಲ್ಲಿನ ಪರಿಸ್ಥಿತಿಯನ್ನು ಮನಗಂಡು ಮಾನ್ಯ ಮುಖ್ಯಮಂತ್ರಿಯವರೂ ಕೂಡ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸುವ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ಇದೇ ವರ್ಷದಿಂದ ಅದನ್ನು ಪ್ರಾರಂಭ ಮಾಡುವುದಕ್ಕೆ ನಿರ್ದಿಷ್ಟವಾದ ಒಂದು ಆದೇಶವನ್ನು ಕೊಟ್ಟಿದ್ದಾರೆಯೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು, ಹಾಗೆ ಇಲ್ಲವಾದಲ್ಲಿ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಆದೇಶವನ್ನು ಏನು ಕೊಟ್ಟಿದ್ದೇವೆ ಎಂದರೆ ಈಗ ಏನು ವಿದ್ಯಾರ್ಥಿ ನಿಲಯವನ್ನು ಟ್ರಾನ್ಸ್‌ಫರ್ ಮಾಡಿ ಆಜ್ಞೆಯನ್ನು ಏನು ಹೊರಡಿಸಿದ್ದೇವೆ, ಅದನ್ನು ರದ್ದುಪಾಡಿ ಜೇವರ್ಗಿಯಲ್ಲಿ ಆ ವಿದ್ಯಾರ್ಥಿನಿಲಯ ಇರತಕ್ಕದ್ದೆಂದೂ, ಅವಶ್ಯಕತೆ ಇದ್ದಲ್ಲಿ ಗುಲ್ಬರ್ಗದಲ್ಲಿಯೂ ಮತ್ತೊಂದು ಹೆಣ್ಣುಮಕ್ಕಳ ವಿದ್ಯಾರ್ಥಿನಿ ನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಕೂಡ ನಾವು ತಯಾರಾಗಿದ್ದೇವೆ.

ಚಿಕ್ಕನಾಯಕನ ಹಳ್ಳಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವುದು

೬೭ (೯೧) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ದನಕರುಗಳಿಗೆಂದು ಮಾರ್ಚ್ ತಿಂಗಳಿನಲ್ಲಿ ತಂದ ಮೇವನ್ನು ಜೂನ್ ತಿಂಗಳಿನ ವರೆವಿಗೂ ನೀಡದಿದ್ದುದರಿಂದ ಅನೇಕ ದನಕರುಗಳು ಸಾವಿಗೀಡಾದುವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಮೇಲ್ಕಂಡ ವಿಷಯವನ್ನು ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ತಂದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ನಿರ್ಲಕ್ಷ್ಯದಿಂದ ಕರ್ತವ್ಯವನ್ನು ನಿರ್ವಹಿಸಿದ ಅಧಿಕಾರಿಗಳ ಮೇಲೆ ಕೂಡಲೇ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಈ ಬಗ್ಗೆ ನಿರ್ದಿಷ್ಟವಾದ ಯಾವ ದೂರುಗಳೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.